ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ಮನಸಾಪುರದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಭೂ ಮಂಜೂರಾತಿ ಪರಿಶೀಲನೆಯಲ್ಲಿದೆ ಯಂತ್ರೋಪಕರಣಗಳ ಸರಬರಾಜಿಗೆ ಆದೇಶ ನೀಡಬೇಕಾಗಿದೆ.

ಆ) ಖಾನಾಪುರ ತಾಲ್ಲೂಕಿನ ಮನಸಾಪುರದಲ್ಲಿ ಸ್ಥಾಪಿಸಲು ನಿರ್ಧರಿಸಿದೆ.

ಇ) ಕಾರಖಾನೆ ಸ್ಥಾಪನೆಗೆ ಸರ್ಕಾರದ ಭೂಮಿಯು ದೊರೆಯುತ್ತಿರುವುದಂ, ಕಾರಖಾನೆಯ ಸುತ್ತಲೂ ೧೦,೦೦೦ ಎಕರೆ ಕಬ್ಬು ಬೆಳೆಯುವ ಪ್ರದೇಶ ಸಾಕಷ್ಟು ಪ್ರಮಾಣದಲ್ಲಿ ನೀರಿನ ಪೂರೈಕೆ ತಾಲ್ಲೂಕು ಕೇಂದ್ರವಾದ ಖಾನಾಪುರಕ್ಕೆ ೩ ಕಿಲೋಮೀಟರ್ ದೂರ ಈ ಕಾರಣಗಳಿಂದ ಮನಸಾಪುರ ವನ್ನು ಆರಿಸಲಾಗಿದೆ.

ಈ) ಹೌದು.

ಧಾರವಾಡದಲ್ಲಿ ಪೋಲೀಸ್ ಸಿಬ್ಬಂದಿ ಹಾಗೂ ಪೋಲೀಸ್ ಠಾಣೆಯ ಕೊರತೆ

೬೩೩. ಶ್ರೀ ಎಸ್. ಆರ್. ಮೋರೆ (ಧಾರವಾಡ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳೇನು ?

ಇ) ಧಾರವಾಡದ ಮಾಳಮಡ್ಡಿ ಭಾಗಕ್ಕೆ ಪೋಲೀಸ್ ಠಾಣೆ ಮಂಜೂರು ಮಾಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಧಾರವಾಡದಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನದಲ್ಲಿದೆ.

ಆ) ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಸದ್ಯದಲ್ಲೇ ಈ ಕೊರತೆಯನ್ನು ನಿವಾರಿಸಲು ನೇಮಕಾತಿ ಮಾಡಲಾಗುವುದು.

ಇ) ಮಾಳಮಡ್ಡಿಯಲ್ಲಿ ಪೋಲೀಸ್ ಠಾಣೆ ತೆಗೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಯಚೂರು ಜಿಲ್ಲೆಯಲ್ಲಿರುವ ಪೋಲೀಸ್ ಠಾಣೆಗಳು

೬೭೦. ಶ್ರೀ ಬಿ. ಹಂಪನಗೌಡ (ಸಿಂಧನೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ಜಿಲ್ಲೆಯಲ್ಲಿರುವ ಆರಕ್ಷಕ ಠಾಣೆಗಳೆಷ್ಟು ? ಹಾಗೂ ಅಲ್ಲಿರುವ ಆರಕ್ಷಕ ಸಿಬ್ಬಂದಿಗಳೆಷ್ಟು ? ಕೊರತೆ ಇರುವ ಆರಕ್ಷಕರುಗಳ ಸಂಖ್ಯೆ ಎಷ್ಟು ?

ಆ) ರಾಯಚೂರು ಜಿಲ್ಲೆಯ ಸಿಂಧನೂರಂ ತಾಲ್ಲೂಕಿನಲ್ಲಿರುವ ಆರಕ್ಷಕ ಠಾಣೆಗಳೆಷ್ಟು? ಹಾಗೂ ಆರಕ್ಷಕ ಸಂಖ್ಯೆಗಳೆಷ್ಟು ?

ಇ) ರಾಯಚೂರು ಜಿಲ್ಲೆಯ ಸಿಂಧನೂರಿಗೆ ಗ್ರಾಮೀಣ ಪೋಲೀಸ್ ಠಾಣೆ ಬೇಕಾಗಿರುವುದಂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಉ) ರಾಯಚೂರು ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ಖರ್ಚಾಗುವ ವೇತನವೆಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ರಾಯಚೂರು ಜಿಲ್ಲೆಯಲ್ಲಿನ ಪೋಲೀಸ್ ಠಾಣೆಗಳು ೩೩. ಪೋಲೀಸ್ ಸಿಬ್ಬಂದಿಗಳು ೮೮೫, ೩ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ೨ ಪೋಲೀಸ್ ಹೆಡ್ ಕಾನ್ಸ್‌ಟೇಬಲ್ ಮಂತ್ರ ಒಂದು ಪೋಲೀಸ್ ಕಾನ್ಸ್‌ಟೇಬಲ್ ಹುದ್ದೆಗಳು ಖಾಲಿ ಇವೆ.